## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀ ಕೆ.ಶಿವಕುಮಾರ, ಭೂ-ವಿಜ್ಞಾನಿ (ನಿವೃತ್ತ) ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 247(ಎ)ರ ಸೌಲಭ್ಯ ಮಂಜೂರು ಮಾಡುವ ಬಗ್ಗೆ – ಆದೇಶ.

ಓದಲಾಗಿದೆ :-1. ಮುಖ್ಯ ಇಂಜಿನಿಯರ್‌ರವರ ಪತ್ರ ಸಂಖ್ಯೆ: ಮುಇಂ/ಪಂರಾಇಂಇ/ಬೆಂ/ಸಿ-9/88/ನಿವೃತ್ತಿ/ಕನಾಸೇನಿ/247-ಎ/ಸೌಲಭ್ಯ/ಕವ್ಯ/2018-19/3610, ದಿನಾಂಕ: 11.10.2018

2. ಸರ್ಕಾರದ ಆದೇಶ ಸಂಖ್ಯೆ : ಆಇ 4 ಎಸ್‌ಆರ್‌ಎ 2016, ದಿನಾಂಕ : 10.04.2017

*****

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 11.10.2018ರ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಶ್ರೀ ಕೆ.ಶಿವಕುಮಾರ, ಭೂ ವಿಜ್ಞಾನಿ (ನಿವೃತ್ತ) ಇವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಸೇರ್ಪಡೆ ಮಾಡಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಆರ್ಥಿಕ ಇಲಾಖೆಯ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ : 10.04.2017ರ ಆದೇಶದಲ್ಲಿ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮೀತವೇತನ ಪದವೀಧರರಾಗಿ ನೇಮಕಾತಿ ಹೊಂದಿ, ತದನಂತರ ಕ್ರಮಬದ್ಧಗೊಳಿಸಲಾದ ಸರ್ಕಾರಿ ನೌಕರರು ನಿವೃತ್ತರಾದ ಪ್ರಕರಣಗಳಲ್ಲಿ ಅವರ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿದ್ದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 247(ಎ)ರಲ್ಲಿನ ಅವಕಾಶಗಳನ್ವಯ ಸಂಬಂಧಪಟ್ಟ ಎಲ್ಲ ಅಗತ್ಯ ಮಾಹಿತಿ / ದಾಖಲೆಗಳನ್ನು ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಹೆಚ್ಚುವರಿ ಸೇವೆಯ ಸೇರ್ಪಡೆ ಅಧಿಕಾರವನ್ನು ಆಯಾ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ರವರಿಗೆ ಪ್ರತ್ಯಾಯೋಜಿಸಲಾಗಿದೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ಕೆ.ಶಿವಕುಮಾರ, ನಿವೃತ್ತ ಭೂ ವಿಜ್ಞಾನಿ ಇವರ ಸೇವಾ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ. | ನೌಕರರ ಹೆಸರು ಮತ್ತು ಪದನಾಮ | ನೌಕರರ ಜನ್ಮ ದಿನಾಂಕ | ನೌಕರರು ದಿನಗೂಲಿ ಆಧಾರದ ಮೇಲೆ ಕೆಲಸಕ್ಕೆ ನೇಮಕ ಹೊಂದಿದ ದಿನಾಂಕ | ದಿನಗೂಲಿಯಿಂದ ಸಕ್ರಮ ಸೇವೆಯಲ್ಲಿ ವಿಲೀನಗೊಂಡ ದಿನಾಂಕ ಮತ್ತು ನೌಕರರ ಸೇವೆಯನ್ನು ಸಕ್ರಮಗೊಳಿಸಿದ ಕಚೇರಿ | ಸೇವೆಯಲ್ಲಿ ಸಕ್ರಮಗೊಂಡಗಾ ನೌಕರರ ವಯಸ್ಸು | ನೌಕರರು ಸೇವೆಯಿಂದ ನಿವೃತ್ತಿ ಹೊಂದಿದ ದಿನಾಂಕ ಮತ್ತು ಸೇವೆಯಿಂದ ಮತ್ತು ಕಚೇರಿ | ನಿವೃತ್ತಿ ಹೊಂದಿದ ದಿನಾಂಕಕ್ಕೆ ನೌಕರರುಸಲ್ಲಿಸಿರುವ ಒಟ್ಟು ಸೇವೆ(ವರ್ಷ, ತಿಂಗಳು, ದಿನಗಳು |
|---|---|---|---|---|---|---|---|
| 1 | ಶ್ರೀ ಕೆ.ಶಿವಕುಮಾರ ಭೂ ವಿಜ್ಞಾನಿ | 01.07.1955 | 08.07.1983 | ದಿನಾಂಕ:08.07.1993 ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 527 ಸೇಶಿಕಾ/94 ಬೆಂಗಳೂರು, ದಿನಾಂಕ:24.10.1994 | 32 | 30.06.2015 ಕಾ.ಇಂ.ಗ್ರಾ.ಕು. ನೀ ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ | 21 ವರ್ಷ, 11ತಿಂಗಳು, |

ಸದರಿಯವರ ಜನ್ಮ ದಿನಾಂಕ : 01.07.1955 ಆಗಿದ್ದು, ಇವರು ಮೂಲತಃ ದಿನಗೂಲಿ ಆಧಾರದ ಯಾಂತ್ರಿಕ ಉಪವಿಭಾಗ ಬಳ್ಳಾರಿ ಇಲ್ಲಿ ನೇಮಕ ಹೊಂದಿ, ನಂತರ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 527 ಸೇಶಿಕಾ 94, ದಿನಾಂಕ:24.10.1994ರಲ್ಲಿ ಹತ್ತು ವರ್ಷಗಳ ಸೇವೆ ಪೂರೈಸಿದ ದಿನಾಂಕದಿಂದ ಕ್ರಮಬದ್ಧಗೊಳಿಸಲಾಗಿದೆ. ಶ್ರೀಯುತರು ಒಟ್ಟಾರೆ 21 ವರ್ಷ 11 ತಿಂಗಳು ಸೇವೆ ಸಲ್ಲಿಸಿ, ದಿನಾಂಕ: 30.06.2015 ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಸದರಿ ದಿನಾಂಕದಂದು ಜಾರಿಯಲ್ಲಿದ್ದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 247(ಎ)ರ ಅವಕಾಶದನುಸಾರ ಗರಿಷ್ಠ ಎರಡು ವರ್ಷಗಳ ಹೆಚ್ಚುವರಿ ಅರ್ಹತಾ ಸೇವೆಯನ್ನು ಮಂಜೂರು ಮಾಡಬಹುದಾಗಿದ್ದು, ಅದರಂತೆ ಎರಡು ವರ್ಷಗಳ ಅಧಿಕ ಅರ್ಹತಾ ಸೇವಾವಧಿಯನ್ನು ಪಿಂಚಣಿ / ನಿವೃತ್ತಿ ಸೌಲಭ್ಯಗಳ ಉದ್ದೇಶಕ್ಕೆ ಮಂಜೂರು ಮಾಡಲು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 425 ಜಿಪಅ 2018, ದಿನಾಂಕ: 22.11.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ಕೆ.ಶಿವಕುಮಾರ್, ಭೂ-ವಿಜ್ಞಾನಿ (ನಿವೃತ್ತ) ಇವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ ಎರಡು ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಸೇರ್ಪಡೆ ಮಾಡಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

22/11/2018

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ :-

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-1)
5. ಸಂಬಂಧಿಸಿದ ಅಧಿಕಾರಿಗೆ

ಪ್ರತಿಯನ್ನು :

1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ
2. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟಿನಲ್ಲಿ ಪ್ರಕಟಿಸುವ ಸಲುವಾಗಿ
3. ರಕ್ಷಾ ಕಡತ / ಸೂಚನಾ ಫಲಕ / ಹೆಚ್ಚುವರಿ ಪ್ರತಿಗಳು